


ಎದೆಬಡಿತವೇ ನಿಂತಂತಾಗಿಬಿಟ್ಟಿತ್ತು. ಇಂಥ ಅಸಾಧ್ಯ ಕಲ್ಪನೆಗಳನ್ನು ಅದೆಷ್ಟು ಬಾರಿ ಮಗುಚಿಹಾಕಿಲ್ಲ ಮನಸು? ಇನ್ನೆಲ್ಲಿಯ ಪ್ರಭಾ... ಇನ್ನೆಲ್ಲಿಯ ಸರಸ್ವತಿ! ಹಾಗೆ ನಿಂತಿರುವ ಹಂತದಲ್ಲಿ ಇದು ನಿಜವ್ರೋ ಸುಳ್ಳೋ ಎಂಬ ಗೊಂದಲವೊಂದು ನನ್ನೊಳಗೆ ಸೆಳವಿನಂತೆ ಹಾದುಹೋಯ್ತು.

'ಅದೆಂಗೆ ಬುಡಕ್ಕಾಯ್ತದೆ? ಎಲ್ಲ ಗ್ಯಾಪ್ಪಿರೋದುಕ್ಕೇ ಅಲ್ವಾ ಉಡಿಕ್ಕಬಂದಿರದು ಬುಡು, ಕರ್ಕ್ಕೋಗು ವಳೀಕೆ ಮದ್ಲು, ಆಮ್ಯಾಕ್ ನೋಡದ ಏನೂಂತ' ಎಂದು ತನ್ನ ಹಿಂದಿನಿಂದ ಬಂದ ಗಡಸು ದನಿಗೆ ಗೊಂದಲ ಕರಗಿ ತಿರುಗಿ ನೋಡಿದ್ದೆ. ಹರವಾದ ಎದೆಯುಳ್ಳ, ಬಲಿಷ್ಠ ತೋಳುಗಳ, ಒಡಕು ಮುಖದ ಅವನು ಯಾವ ದೇವರು ಬಂದು ಹೇಳಿದರೂ ದಿನೇಶನೆಂದು ನಂಬುವ ಹಾಗಿರಲಿಲ್ಲ. ನಾನು